

## ಇಲ್ಲಿಯವರೆಗೆ

ಪೂರ್ಣಿಮಾ ಮದುವೆಯ ನಿಶ್ಚಿತಾರ್ಥದ ಸಂಭ್ರಮ ಸಡಗರ ನಡೆಯುತ್ತಿರುತ್ತದೆ. ಪದ್ಮನಾಭ ಅಪ್ಪನನ್ನು ಹೋಗಿ ಕರೆದು ಬಂದ ಮೇಲೆ ನಾಗಮ್ಮನಿಗೆ ಏನೋ ತಳಮಳ. ಗಂಡ ಆದವನು ಮನೆ ಬಿಟ್ಟು ಹೋಗಿ ಹದಿನೇಳು ವರ್ಷದ ಬಳಿಕ ಮತ್ತೆ ಬರುತ್ತಿದ್ದಾನೆ. ಅವನು ಮಾತನಾಡಿಸುತ್ತಾನೋ ಇಲ್ಲವೋ, ಬೀಗರ ಮುಂದೆ, ನೆರೆದವರ ಮುಂದೆ ಹೇಗೆ ಒಳಸುಳಿಯನ್ನು ಬಿಟ್ಟುಕೊಡದೇ ಇರುವುದು ಮುಂತಾದ ಪ್ರಶ್ನೆ ಕಾಡುತ್ತದೆ. ರಾಮಚಂದ್ರ ಬಂದವನು ಸೀದಾ ಮಗಳ ಬಳಿ ಬರುತ್ತಾನೆ. ಇದನ್ನು ಮರೆಯಲ್ಲೇ ನೋಡುತ್ತಾಳೆ ನಾಗಮ್ಮ. ಶಾಸ್ತ್ರಗಳೆಲ್ಲ ಮುಗಿದ ಮೇಲೆ ರಾಮಚಂದ್ರ ಮರಳಿ ಹೋಗುತ್ತಾನೆ. ಆಗ ಪದ್ಮನಾಭ ಉಳಿಯುವಂತೆ ಒತ್ತಾಯಿಸಿದರೂ ಕೇಳದೇ ಹೊರಡುತ್ತಾನೆ. ಅಪ್ಪನನ್ನು ಸ್ವಲ್ಪದೂರ ಕಳಿಸಿಕೊಡಲು ಹೋದ ಪದ್ಮನಾಭ ಮತ್ತೆ ಮರಳಿ ಬಂದು ಕೈಚೀಲದಲ್ಲಿ ಅಪ್ಪನಿಗೆ ರಾತ್ರಿ ಊಟ ಕಟ್ಟಿಕೊಡುತ್ತಾನೆ. ಅಪ್ಪ ಬಸ್ ಹತ್ತುವವರೆಗೆ ಇದ್ದು ಮನೆಗೆ ಬರುತ್ತಾನೆ ಪದ್ಮನಾಭ.

ಕಟ್ತೀನಿ, ಆಯ್ತಾ?'

'ಇಷ್ಟಾರೂ ಮರ್ಯಾದೆ ಇಟ್ಗಂಡಿದೀಯಲ್ಲ, ಸೇರು ಹಾಲು ಕುಡಿದಷ್ಟು ಸಂತೋಷ ಆಯ್ತು..'

ಒಂದು ಜಾತಕ ನೋಡಿಸಲಿಲ್ಲ, ಕೊಡು ಬಿಡು ಮಾತಾಡಲಿಲ್ಲ. ಅಮ್ಮನ ಪ್ರಕಾರ ಮಕ್ಕಳಾಟದ ಹಾಗೆ ನಡೆದು ಹೋಗಿತ್ತು ಅಣ್ಣನ ಮದುವೆ. ಅಕ್ಕಿ, ಕಡಲೇಬೇಳೆ ಪರಮಾನ್ನದಲ್ಲೇ ಎಲ್ಲಾ ಮುಗಿಸಿಬಿಟ್ರು ಕುಂಯ್ಗುಟ್ಟಿದ್ದಳು ಅಮ್ಮ. ಹಿರೀ ಮಗನ ಮದುವೆಯನ್ನು ಊರ ಮಂದಿ ಬೆಟ್ಟು ಕಚ್ಚಿಕೊಳ್ಳುವ ಹಾಗೆ ಹುಡಿ ಹಾರಿಸಬೇಕೆಂದು ಕನಸು ಕಂಡಿದ್ದವಳಿಗೆ ಆಶಾಭಂಗ. ಹೆಳೆಗೆ ಒಂದು ಚಪ್ಪರ ಹಾಕಿ ಮನೆ ಬಾಗಿಲಲ್ಲಿ ಮದುವೆ ಮಾಡಿಕೊಟ್ಟು ಸಲೀಸಾಗಿ ಕೈ ತೊಳೆದುಕೊಂಡು ಬಿಟ್ಟರು ಎಂಬ ಆರೋಪ. ಹಿರಿ ಸೊಸೆಯಾಗಿ ಮನೆಗೆ ಕಾಲಿಟ್ಟ ಭವಾನಿ ವಾಸ್ತವವಾಗಿ ಪುಣ್ಯಕೋಟಿಯಂತಾ ಹೆಣ್ಣುಮಗಳು. ಮುಂದೆ ಬಂದರೆ ಹಾಯದ, ಹಿಂದೆ ಬಂದರೆ ಒದೆಯದ ಬರೀ ಪಾಪದವಳು. ಅತ್ತೆ ಏನಾದರೂ ಹಂಗರಣೆಯ ಮಾತಾಡಿದರೆ ಕೇಳಿಯೂ ಕೇಳದವಳ ಹಾಗೆ ಇರುತ್ತಿದ್ದುದು ಅವಳ ಸ್ವಭಾವವಾ, ಅಥವಾ ಹೀಗಿರು ಎಂದು ಅಣ್ಣ ಹೇಳಿಕೊಟ್ಟಿದ್ದಾ? ವರ್ಷ ಕಳೆಯುವುದರಲ್ಲಿ ಅತ್ತಿಗೆ ಗಂಡು ಮಗನನ್ನು ಹೆತ್ತು ಅತ್ತೆಯ ತೊಡೆಯ ಮೇಲಿಟ್ಟು, ಬಾಣಂತನ ತೌರುಮನೆಯಲ್ಲಿ ಆಗಿದ್ದು ಅನ್ನುವುದು ಹೆಳೆಗೆ. ಗಂಡನ ಮನೆಯಿಂದಲೇ ಪ್ರತಿಯೊಂದೂ ಸರಬರಾಜು. ಹಾಲು ಅಡಿಕೆ, ತುಪ್ಪದ ಬಾಟಲಿ, ಪಥ್ಯದ ಸಾರಿಗೆ ಮೆಣಸಿನಕಾಳು, ವಾಟೆಹುಳಿಯಿಂದ ಹಿಡಿದು ತಲೆಗೆ ಎರೆದುಕೊಳ್ಳಲು ಸೀಗೇಪುಡಿಯವರೆಗೆ ಕಟ್ಟಿ ಕಟ್ಟಿ ತೆಗೆದುಕೊಂಡು ಹೋಗುತ್ತಿದ್ದಳು ಅಮ್ಮ, ಜೋರಾಗಿ ಕೂಕ್.. ಎಂದು ಕೂಗು ಹಾಕಿದರೆ ಕೇಳುವಷ್ಟು ದೂರದಲ್ಲಿದ್ದ ಸೊಸೆಯ ಮನೆಗೆ.

'ಎಲ್ಲಾ ಕಟ್ಟಿ ಸೊಸೆ ಮನೆಗೆ ಸಾಗಿಸಿ ಮನೆ ತೊಳೆದಿಟ್ಟಬಿಡು ಆಯ್ತಾ? ಹೇಳೋರು, ಕೇಳೋರು ಯಾರೂ ಇಲ್ಲ ನಿಂಗೆ' ಅಣ್ಣ ಕುಶಾಲಿನ ಮಾತಾಡುತ್ತಿದ್ದ.

'ಹೋಗೋ, ನನ್ನ ಕೇಳೋಕೆ ನೀನ್ಯಾವ ಊರಿನ ಕೋತಪ್ಪನಾಯ್ಕ?'

ಸುಖ, ಸಂತೋಷ, ನಗು, ಉಲ್ಲಾಸ. ಹೀಗಿದ್ದರೂ ಅಮ್ಮನ ಮನಸ್ಸಲ್ಲಿ ತನ್ನ ಕಿರಿಮಗನಿಗೆ ಅನುಕೂಲವಂತರ ಮನೆಯಿಂದ ಒಬ್ಬ ಹುಡುಗಿಯನ್ನು ಹುಡುಕಿ ಮನೆ ತುಂಬಿಸಿಕೊಳ್ಳಬೇಕೆಂಬ ಚಪಲ ಕಮ್ಮಿಯಾಗಿರಲಿಲ್ಲ. ಹಾಗೆ ತಮ್ಮ ಮನೆಯಲ್ಲಿ ಉಂಡುಡಲು ಕೊರತೆ ಎಂಬುದೇನಿಲ್ಲ. ತೋಟ, ಗದ್ದೆ, ಎಂದು ನೆಮ್ಮದಿಯ ಬದುಕು ಮಾಡಲು ಅರೆಯಾದದ್ದಿಲ್ಲ. ಆದರೂ ಆಸೆ ಎನ್ನುವುದು ಯಾರಪ್ಪನ ಮನೆಯದು? ಇಷ್ಟಿದ್ದರೆ ಇನ್ನಷ್ಟು, ಇನ್ನಷ್ಟಿದ್ದರೆ ಮತ್ತಷ್ಟು, ಬೇಕು ಅನ್ನುವುದಕ್ಕೆ ಇಂತಿಷ್ಟು ಎನ್ನುವ ಪರಿಮಾಣ ಎಲ್ಲಿದೆ?

* * *

ಹೊದ್ದ ಶಾಲಿನೊಳಗೆ ಬೆವರು ಕಿತ್ತುಕೊಳ್ಳುತ್ತಿದೆ. ಸೆಕೆ ಸೆಕೆ ಅನಿಸಿತು ರಾಮಚಂದ್ರನಿಗೆ. ಕಿಟಕಿಯ ಬಾಗಿಲುಗಳನ್ನೆಲ್ಲಾ ಹಾಕಿಟ್ಟಿರುವ ಮುಚ್ಚಿಗೆ ಕೋಣೆ. ಸೆಕೆಯಾಗದೆ ಇರುತ್ತದೆಯಾ? ಎದ್ದು ಕಿಟಕಿ ಬಾಗಿಲು ತೆಗೆದ. ಸಣ್ಣಗೆ ಗಾಳಿ ಬೀಸಿ ಬಂದು ಹಾಯೆನಿಸಿತು. ಒಳಗೆ ಹೋಗಿ ಒಂದು ಲೋಟ ನೀರು ಕುಡಿದು ಬಂದ. ಎಲ್ಲಿಗೆ ಹೋಗಿ ತಲುಪುತ್ತದೆ ಎಂದು ಅರಿವಾಗುವಷ್ಟು ತಣ್ಣಗಿತ್ತು ತಾಮ್ರದ ತಪ್ಪಲೆಯಲ್ಲಿ ತುಂಬಿಸಿಟ್ಟ ನೀರು. ಸೆಕೆ ಅನ್ನುವುದು ತನ್ನ ಭ್ರಮೆಯಾಗಿತ್ತಾ? ಇದೀಗ ಚಳಿ ಚಳಿ.

ಹೋಗಿ ಮಲಗಿಕೊಂಡ ರಾಮಚಂದ್ರ. ದಿನಚರಿಯಲ್ಲಾದ ಅನೂಹ್ಯ ಬದಲಾವಣೆಯ ಕಾರಣದಿಂದಿರಬಹುದು, ಮನಸ್ಸೊಳಗೆ ಒಂಥರದ ಕಸಿವಿಸಿ. ಎಲ್ಲಿಗೆ ನಿಂತಿತ್ತು ಗಾಡಿ? ಹಾಂ, ಅಣ್ಣ ರಘುರಾಮನಿಗೊಬ್ಬ ಮಗ ಹುಟ್ಟಿ, ಅಮ್ಮನ ಅಸಮಾಧಾನ ತಣ್ಣಗಾಗುತ್ತಾ ಬಂದಿತ್ತು. ಕಿರಿ ಮಗನಿಗೆ ಯೋಗ್ಯ ಹುಡುಗಿಯನ್ನು ತಲಾಷು ಮಾಡುವ ಗೀಳು ಶುರುವಾಗಿತ್ತು. ಯಾರು ಕಂಡರೆ ಅವರ ಹತ್ತಿರ ಇದೇ ರಾಗ. ಪ್ರತಿವರ್ಷ ತಪ್ಪದೆ ಅಡಿಕೆ ಸಂಭಾವನೆಗೆ ಹಾಜರಿ ಹಾಕುತ್ತಿದ್ದವರ ಪೈಕಿ ಅಮ್ಮನ ವಿಶ್ವಾಸಕ್ಕೆ ಪಾತ್ರರಾದ ಕೆಲವರಾದರೂ ಇದ್ದರು. ಅಂತವರು ಮಧ್ಯಾಹ್ನದ ಹೊತ್ತಿಗೆ ಬಂದರೆ ಇವರ ಮನೆಯಲ್ಲೇ ಊಟ ಮಾಡಿ, ರಾತ್ರಿ ಹೊತ್ತಿಗೆ ಬಂದರೆ ಇಲ್ಲೇ ಉಂಡು ಮಲಗಿ, ಬೆಳಿಗ್ಗೆ ಎದ್ದು ಸ್ನಾನ, ಜಪತಪ ಮುಗಿಸಿ, ತಿಂಡಿ ತಿಂದು ನಂತರ ಮುಂದಿನ ಮನೆಗೆ ಸರ್ಕೀಟು ಹೋಗುತ್ತಿದ್ದರು. ಹೆಸರಿಗೆ ಹೋದ ದೇವಸ್ಥಾನಗಳ ವತಿಯಿಂದ ಬರುತ್ತಿದ್ದವರಿಗೆ, ತೀರಾ ಬಳಕೆಯಾದವರಿಗೆ, ಸಂಭಾವನೆ ಕೊಡುವ ವಿಷಯದಲ್ಲಿ ಅಮ್ಮ ಕೈ ಬಿಗಿ ಮಾಡದೆ ಧಾರಾಳಿಯಾಗಿರುತ್ತಿದ್ದಳು. ತುಂಬಿದ ಅಡಕೆ ಮೂಟೆಯ ಮೇಲೆ ಇಟ್ಟಿರುತ್ತಿದ್ದ ಸಣ್ಣ ತಟ್ಟೆಯ ಬದಲು ಅವರಿಗೆ ದೊಡ್ಡ ತಟ್ಟೆಯಲ್ಲಿ ಸಂಭಾವನೆ ಕೊಟ್ಟು ಕೃತಾರ್ಥಳಾಗುತ್ತಿದ್ದಳು. ಹೀಗೆ ವರ್ಷ ವರ್ಷ ಬರುತ್ತಿದ್ದವರಲ್ಲಿ ಒಂದು ಜನ ಅಮ್ಮನ ಬಾಯಿಂದ ಉದುರಿ ಬಿದ್ದ ಮಾತು ಕೇಳಿ ಒಂದು ಸಂಬಂಧದ ಪ್ರಸ್ತಾಪ ಮುಂದಿಟ್ಟರು. ಮದುವೆಗೆ ನೆರೆದಿರುವ ಹುಡುಗಿ ಇರುವಂತಾ ಒಂದು ಕುಟುಂಬದ ಪರಿಚಯ ಅವರಿಗಿದೆ. ಮನೆಗೆ ಒಬ್ಬಳೇ ಮಗಳು. ಮದುವೆಯಾಗಿ ಹತ್ತು ವರ್ಷಗಳ ನಂತರ ಹುಟ್ಟಿದ ಏಕೈಕ ಸಂತಾನ. ಆಸ್ತಿಪಾಸ್ತಿ ಸಾಕಷ್ಟಿದೆ. ಬಾಳೆಹಣ್ಣಿನ ಗುಡಾಣದಲ್ಲಿಟ್ಟು ಅನ್ನುವಂತೆ ಮುದ್ದಿನಿಂದ ಸಾಕಿದ್ದಾರೆ. ನೋಡುವುದಕ್ಕೂ ಚೆನ್ನಾಗಿದ್ದಾಳೆ ಹುಡುಗಿ. ಈ ಕಡೆಯವರು ಹೂಂಗುಟ್ಟಿ, ಆ ಕಡೆಯವರಿಗೂ ಪ್ರಸ್ತಾಪ ಒಪ್ಪಿತವಾದಲ್ಲಿ ಅಲ್ಲಿಂದ ಜಾತಕ ತಂದು ತಲುಪಿಸುವ ಜವಾಬ್ದಾರಿ ಅವರದ್ದು.

ಏಕೈಕ ಸಂತಾನ ಅಂದ ಕೂಡಲೆ ಅಮ್ಮನ ಕಿವಿ ನೆಟ್ಟಗಾಗಿತ್ತಾ? ಮೊದಲ ಮಗನ ನಸೀಬಿನಲ್ಲಿ ಬರೆದಿರದೆ ಇದ್ದಿದ್ದು ಎರಡನೆಯವನ ಮೂಲಕ ಒದ್ದುಕೊಂಡು ಬರುತ್ತಿದೆ ಅಂತಾದರೆ ಯಾಕೆ ಬೇಡ? ಅಮ್ಮ ಜೊಲ್ಲು ನುಂಗಿಕೊಳ್ಳುತ್ತಾ, ಹಾಗೆಂದು ಅಂದುಕೊಂಡಿದ್ದಾನೆ ರಾಮಚಂದ್ರ.

'ಅಷ್ಟು ಮಾಡಿ ಪುಣ್ಯ ಕಟ್ಕಳಿ ಮಾರಾಯ್ರಾ. ಮನೇಲಿ ಹಿರಿ ತಲೆ ಅಂತ ಒಬ್ಬರಿದ್ದಿದ್ರೆ ನಿಮಗೆ ತಾಪತ್ರಯ ಕೊಡ್ತಿರ್ಲಿಲ್ಲ ನಾನು. ಏನ್ಮಾಡ್ತೀರಿ ಹೇಳಿ, ಹಣೇಬರ.. ಮಕ್ಕಳು ಸಣ್ಣವರಿದ್ದಾಗಲೇ ತೋಟದಲ್ಲಿ ಹಾವು ಕಚ್ಚಿದ್ದು ಹೆಳೆಯಾಗಿ ಕೈ ಹಿಡಿದವನು ಇನ್ನಿಲ್ಲವಾಗಿದ್ದನ್ನು ನೆನೆದು ಗದ್ಗದಳಾಗಿದ್ದಳು ಅಮ್ಮ. ನಾಗರಹಾವಿನಿಂದ ಕಚ್ಚಿಸಿಕೊಂಡವರು ಮನೆಯ ಸೂರಿನೊಳಗೆ ಕಾಲಿಡಬಾರದು ಎನ್ನುವುದು ಒಂದು ನಂಬಿಕೆ, ಹೇಳಿಕೆ. ಗಾಬರಿಯಿಂದಲೇ ಇರಬಹುದು, ಅಪ್ಪ ಸೀದಾ ಮುಂಚೇ ಕಡೆಗೆ ನುಗ್ಗಿಬಿಟ್ಟಿದ್ದ. ಅಡಿಕೆ ತೋಟದ